ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	62 (126)
ಸದಸ್ಯರ ಹೆಸರು	ಶ್ರೀ ನಸೀರ್ ಅಹ್ಮದ್
ಉತ್ತರಿಸಬೇಕಾದ ದಿನಾಂಕ	21.09.2020
ಉತ್ತರಿಸಬೇಕಾದ ಸಚಿವರು	ಉಪ ಮುಖ್ಯಮಂತ್ರಿಗಳು (ಉನ್ನತ ಶಿಕ್ಷಣ)

	ಪ್ರಶ್ನೆ	ಉತ್ತರ
ಅ	ಸರ್ಕಾರಿ ಪದವಿ ಕಾಲೇಜುಗಳ ಸಹಾಯಕ ಪ್ರಾಧ್ಯಾಪಕರ ಹುದ್ದೆಗೆ ನೇಮಕ ಮಾಡಲು ಸರ್ಕಾರದಿಂದ ಅಧಿಸೂಚನೆ ಹೊರಡಿಸಲಾಗಿದೆಯೇ; ಹೊರಡಿಸಿದ್ದಲ್ಲಿ, ಅಧಿಸೂಚನೆಯ ಪ್ರತಿಯನ್ನು ನೀಡುವುದು.	ಇಲಾಖೆಯ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಖಾಲಿ ಇರುವ 1242 ಸಹಾಯಕ ಪ್ರಾಧ್ಯಾಪಕರ ಹುದ್ದೆಗಳನ್ನು ಭರ್ತಿ ಮಾಡುವ ಸಂಬಂಧ ಸರ್ಕಾರದ ಅಧಿಸೂಚನೆ ಸಂಖ್ಯೆ: ಇಡಿ/257/ಡಿಸಿಇ/2019(ಭಾ-3), ದಿನಾಂಕ:08.07.2020ರಲ್ಲಿ ಅಂತಿಮ ವಿಶೇಷ ನಿಯಮಗಳನ್ನು ಹೊರಡಿಸಲಾಗಿದೆ. ಆದರೆ ಸಹಾಯಕ ಪ್ರಾಧ್ಯಾಪಕರ ಹುದ್ದೆಗೆ ನೇಮಕ ಮಾಡಲು ನೇಮಕಾತಿ ಅಧಿಸೂಚನೆಯನ್ನು ಹೊರಡಿಸಿರುವುದಿಲ್ಲ.
ಆ	ಪ್ರಸ್ತುತ ನೇಮಕಾತಿ ಪ್ರಕ್ರಿಯೆಯ ಯಾವ ಹಂತದಲ್ಲಿದೆ (ವಿವರ ನೀಡುವುದು)	ಆರ್ಥಿಕ ಇಲಾಖೆಯ ಸುತ್ತೋಲೆ ಸಂಖ್ಯೆ:ಆಇ/03/ಬಿಇಎಂ/2020, ದಿನಾಂಕ:06.07.2020 ರಲ್ಲಿ ಪ್ರಸ್ತುತ ಕೋವಿಡ್-19 ಹಿನ್ನೆಲೆಯಲ್ಲಿ 2020-21 ನೇ ಸಾಲಿನ ಆರ್ಥಿಕ ವರ್ಷದಲ್ಲಿ ಎಲ್ಲಾ ನೇರ ನೇಮಕಾತಿ ಹುದ್ದೆಗಳನ್ನು ಭರ್ತಿ ಮಾಡುವುದನ್ನು ಮುಂದಿನ ಆದೇಶದವರೆಗೆ ತಡೆಹಿಡಿಯಲಾಗಿದೆ. ಆದ್ದರಿಂದ, ಈ ನೇಮಕಾತಿಗೆ ಆರ್ಥಿಕ ಇಲಾಖೆಯ ಸಹಮತಿ ದೊರೆತ ನಂತರ ನೇಮಕಾತಿ ಪ್ರಕ್ರಿಯೆಯನ್ನು ಪ್ರಾರಂಭಿಸಲಾಗುವುದು.
ಇ)	ಈಗಾಗಲೇ ಎಷ್ಟು ಜನರಿಗೆ ನೇಮಕಾತಿ ಆದೇಶ ನೀಡಲಾಗಿದೆ ಹಾಗೂ ಬಾಕಿ ಉಳಿದಿರುವ ಸಂಖ್ಯೆ ಎಷ್ಟು;	
ಈ)	ಉಳಿದವರಿಗೆ ನೇಮಕಾತಿ ನೀಡಲು ಉಂಟಾಗಿರುವ ಸಮಸ್ಯೆಗಳೇನು:	
ಉ)	ನೇಮಕಾತಿ ಮಾಡಲು ಸಮಿತಿ ರಚಿಸಲಾಗಿತ್ತೆ; ಸಮಿತಿಯು ವರದಿಯನ್ನು ನೀಡಲಾಗಿದೆಯೇ? (ನೀಡಿದ್ದಲ್ಲಿ ಅದರ ಪ್ರತಿ ನೀಡುವುದು)	

ಇಡಿ 160 ಡಿಸಿಇ 2020

(ಡಾ. ಅಶ್ವಥ್ ನಾರಾಯಣ ಸಿ.ಎನ್.)
ಉಪ ಮುಖ್ಯಮಂತ್ರಿಗಳು (ಉನ್ನತ ಶಿಕ್ಷಣ)